ಓ.ಎಸ್.ನಂ.122-2023
ಡಿ.ಡಬ್ಲು-೧

ದಿ: 19-02-2026 ರಂದು ೧ನೇ ಪ್ರತಿವಾದಿಯ ಜಿ.ಪಿ.ಎ ದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆ : ಪ್ರತಿವಾದಿ ಪರವಾಗಿ ಶ್ರೀಯುತ ಡಿ.ಜಿ ವಕೀಲರಿಂದ :**

ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತವೆ ಮತ್ತು ಸದರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ದಿ: 27.01.2026 ರಂದು ೧ನೇ ಪ್ರತಿವಾದಿಯು ಬರೆದುಕೊಟ್ಟ ವಿಶೇಷ ಮುಖ್ತಾರ ನಾಮೆಯನ್ನು ಹಾಜರುಪಡಿಸಿದ್ದು ನಿ.ಡಿ.2 ಎಂದು, ದಿ: 01.12.2003 ರಂದು ಪೀಟರ್ ಐಸಾಕ್ ರವರು ಸರ್ವೆ ನಂ.154/2ಎ ಜಮೀನಿನ ಕುರಿತು ಬರೆದುಕೊಟ್ಟ ನೊಂದಾಯಿತ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.3 ಎಂದು, ದಿ: 01.12.2003 ರಂದು ಪೀಟರ್ ಐಸಾಕ್ ರವರು ಸರ್ವೆ ನಂ.154/2ಬಿ ಜಮೀನಿನ ಕುರಿತು ಬರೆದುಕೊಟ್ಟ ನೊಂದಾಯಿತ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.4 ಎಂದು, ಕಣ್ಣೂರಹಳ್ಳಿ ಗ್ರಾಮದ ಸರ್ವೆ ನಂ.154 ಹಿಸ್ಸಾ 2ಎ ವಿಸ್ತೀರ್ಣ 2.34 ಎಕರೆ ಜಮೀನಿನ 2023-24 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ನಿ.ಡಿ.5 ಎಂದು, ಕಣ್ಣೂರಹಳ್ಳಿ ಗ್ರಾಮದ ಸರ್ವೆ ನಂ.154 ಹಿಸ್ಸಾ 2ಎ ವಿಸ್ತೀರ್ಣ 2.34 ಎಕರೆ ಜಮೀನಿನ 2024-25 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ನಿ.ಡಿ.6 ಎಂದು, ಕಣ್ಣೂರಹಳ್ಳಿ ಗ್ರಾಮದ ಸರ್ವೆ ನಂ.154 ಹಿಸ್ಸಾ 2ಎ ವಿಸ್ತೀರ್ಣ 2.34 ಎಕರೆ ಜಮೀನಿನ 2025-26 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ನಿ.ಡಿ.7 ಎಂದು, 6 ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಡಿ.8 ಎಂದು, ನಿ.ಡಿ.8 ಛಾಯಾಚಿತ್ರಗಳ ಸಿ.ಡಿ.ಯನ್ನು ಹಾಜರುಪಡಿಸಿದ್ದು ನಿ.ಡಿ.9 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ವಜಾಗೊಳಿಸಬೇಕೆಂದು ಪ್ರಾರ್ಥನೆ.

ಪಾಟೀ ಸವಾಲು: ವಾದಿ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.

Case called out.
The SPA holder of defendant no.1 is present.
The counsel for the defendants files application U/o. 8 Rule 1(a) of CPC(I.A.No.IX)., along with list of documents.
On the other hand, the counsel for the plaintiff submits that application may be allowed on cost.
Heard,
Perused the application and reasons assigned thereon. The reason assigned in the application for delay in producing the documents is justified. Hence, I.A.No.IX is allowed on cost of Rs.200/-.
The SPA holder of defendant no.1 files affidavit in lieu of examination in chief and examined as D.W.1 and got marked Ex.D.2 to Ex.D.9.
For Cross examination of DW-1 by:26.02.2026.

**Prl.C.J. and JMFC, Hoskote.**